ದಿನಾಂಕ 14-03-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು ಅರ್ಜಿದಾರನಿದ್ದು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ. ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಶಾನೆಗಳಾಗಿ ಗುರುತು ಮಾಡಬೇಕೆಂದು ಕೋರುತ್ತೇನೆ.

| | |
|---|---|
| ನಿಪಿ-1 | ದೂರಿನ ದೃಢೀಕೃತ ನಕಲು |
| ನಿಪಿ-2 | ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲು |
| ನಿಪಿ-3 | ನನ್ನ ಆಧಾರ್ ಕಾರ್ಡಿನ ನೋಟರೈಸ್ಡ್ ಪ್ರತಿ |

ಮೇಲ್ಕಂಡ ದಾಖಲೆಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-3 ಎಂದು ಗುರುತಿಸಲಾಯಿತು.

ನಿಪಿ-3 ರ ಮೂಲ ದಾಖಲೆಯನ್ನು ಸಾಕ್ಷಿದಾರರು ಹಾಜರುಪಡಿಸಿದ್ದು, ನಿಪಿ-3 ನ್ನು ಮೂಲ ದಾಖಲೆಯೊಂದಿಗೆ ತಾಳೆ ನೋಡಿ ಮೂಲ ದಾಖಲೆಯು ಸಾಕ್ಷಿದಾರರ ದೈನಂದಿಕ ಕಾರ್ಯಗಳಿಗೆ ಅವಶ್ಯಕತೆ ಇದೆ ಎಂದು ಹೇಳಿದ ಕಾರಣ ಮೂಲ ದಾಖಲೆಯನ್ನು ಅವಶ್ಯಕತೆ ಇದ್ದ ಪಕ್ಷದಲ್ಲಿ ಹಾಜರುಪಡಿಸುವ ಷರತ್ತಿಗೊಳಪಡಿಸಿ ಸಾಕ್ಷಿದಾರರಿಗೆ ಹಿಂದಿರುಗಿಸಲಾಯಿತು.

<u>ಎಂ.ವಿ.ಸಿ. ನಂ.454/2022 ರಲ್ಲಿ</u>
ಪಿ.ಡಬ್ಲ್ಯೂ-1(ಪ್ರಸನ್ನ ಕುಮಾರ್)

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯ ಮಂಡಳಿಯ
ಪೀಠಾಧಿಕಾರಿಗಳು.